ಶ್ರೀ ಸಿದ್ದರಾಮಯ್ಯ: ಅದೆಲ್ಲಾ ಸರ್ಕಾರದ ಹತ್ತಿರ ಇದೆ, ನನ್ನ ಹತ್ತಿರ ಇಲ್ಲ. ನಿಮಗೆ ಸಿ.ಎಂ. ಹೇಳಿದ್ದಾರೆ, ನೀವು ಆಗಾಗ ಎದ್ದು ಮಾತನಾಡುತ್ತಿರಲ್ಲಾ ಅದಕ್ಕೆ ಇರಲಿ ಎಂದು ಆ ರೀತಿ information ಕೊಟ್ಟು ಬಿಟ್ಟಿದ್ದಾರೆ. Don't believe it. ನೀವು ಮಧ್ಯೆ ಎದ್ದು ನಿಲ್ಲುತ್ತಿರಲ್ಲಾ ಅದಕ್ಕೆ ಇರಲಿ ಎಂದು ನಿಮಗೆ ಅಂಕಿ-ಅಂಶಗಳನ್ನು ಕೊಟ್ಟಿದ್ದಾರೆ, but it is not true. ಮಾನ್ಯ ಅಧ್ಯಕ್ಷರೆ, ನನಗೆ ಗಂಟಲು ನೋವಾಗುತ್ತಿದೆ. ನಾನು ನಾಳೆ I will continue.

ಶ್ರೀ ಬಿಎಸ್ ಯಡಿಯೂರಪ್ಪ: ಇವತ್ತೆ ಮಾತನಾಡಿ ಮುಗಿಸಿ.

ಶ್ರೀ ಸಿದ್ದರಾಮಯ್ಯ: ತಾವು ನಿನ್ನೆ ಮೂರು ದಿವಸಗಳ ಚರ್ಚೆ ಮಾಡೋಣವೆಂದು ಹೇಳಿ, ಈಗ ಮುಗಿಸಿ ಎಂದು ಹೇಳುತ್ತಿದ್ದೀರಿ. ನನಗೆ throat infection ಆಗಿದೆ, ನಾಳೆ ಮಾತನಾಡುತ್ತೇನೆ.

ಅಧ್ಯಕ್ಷರು: ಆಯಿತು, ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ.

7. ಗಮನ ಸೆಳೆಯುವ ಸೂಚನೆ:

ಅ) ವಿಷಯ: ಸಬ್‌ಮಿಷನ್ ಯೋಜನೆ ಚಾಮರಾಜನಗರ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಬಗ್ಗೆ.

ಶ್ರೀ ಹೆಚ್ ಎಸ್ ಮಹದೇವಪ್ರಸಾದ್(ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಿಗೆ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಗದೀಶ್‌ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ತಾಲ್ಲೂಕಿನ 166 ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರು ಸರಬರಾಜು ಮಾಡುವ ರೂ.60.95 ಕೋಟಿ ಅಂದಾಜಿನ ಯೋಜನೆಗೆ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ 131 ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರು ಸರಬರಾಜು ಮಾಡುವ ರೂ.42.00 ಕೋಟಿ

ಅಂದಾಜಿನ ಯೋಜನೆಗೆ ದಿನಾಂದ 18/10/2006 ರಂದು ನಡೆದ ರಾಜ್ಯ ಮಟ್ಟದ ಎಂಪವರ್ಡ್ ಸಮಿತಿ ಸಭೆಯಲ್ಲಿ ಕೇಂದ್ರದ ಅನುದಾನ ನಿರೀಕ್ಷಿಸಿ ತಾತ್ವಿಕ ಅನುಮೋದನೆ ನೀಡಲಾಗಿದೆ. ಪೂರ್ವ ಸಿದ್ಧತೆಯಾಗಿ ಇದರೊಂದಿಗೆ ಇತರೆ ಕೆಲವು ಬೃಹತ್ ಯೋಜನೆಗಳಿಗೂ ಸಚಿವ ಸಂಪುಟದ ಅನುಮೋದನೆ ನೀಡಲಾಗಿದೆ. ಈ ಕುರಿತಂತೆ ಕೇಂದ್ರ ಸರ್ಕಾರಕ್ಕೆ ಹಲವಾರು ಬಾರಿ ಪತ್ರ ವ್ಯವಹಾರಗಳನ್ನು ಸೂಕ್ತ ಸಮರ್ಥನೆಯೊಂದಿಗೆ ಮಾಡಲಾಗಿದೆ. ಆದರೆ ಈ ಬೃಹತ್ ಯೋಜನೆಗೆ ನಿರೀಕ್ಷೆಯಂತೆ ಇದುವರೆವಿಗೂ ಕೇಂದ್ರ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿರುವುದಿಲ್ಲ ಮತ್ತು ಹಣ ಬಿಡುಗಡೆ ಸಹ ಆಗಿರುವುದಿಲ್ಲ. ಕೇಂದ್ರವು ರಾಜ್ಯಕ್ಕೆ ಒಟ್ಟಾರೆ ನೀಡುವ ಅನುದಾನದ ವ್ಯಾಪ್ತಿಯೊಳಗೆ ಇದನ್ನು ಅಗತ್ಯತೆಯನುಸಾರ ಅನುಷ್ಠಾನಗೊಳಿಸಲು ಮಾತ್ರ ಸೂಚನೆ ನೀಡುತ್ತಿದೆ. ಈ 2 ಯೋಜನೆಗಳ ಅಂದಾಜನ್ನು 2004–05 ನೇ ಸಾಲಿನ ದರಪಟ್ಟಿಯಂತೆ 2026ರ ಜನಸಂಖ್ಯೆಗೆ ಕ್ರಮವಾಗಿ ರೂ.60.95 ಕೋಟಿ ಹಾಗೂ ರೂ.42.00 ಕೋಟಿಗಳಿಗೆ ತಯಾರಿಸಲಾಗಿದ್ದು, ಈಗ ಪ್ರಸಕ್ತ ಸಾಲಿನ ದರಪಟ್ಟಿಯಂತೆ 2031ರ ಸಾಲಿನ ಪ್ರಾಕ್ಷೇಪಿತ ಜನಸಂಖ್ಯೆ ಆಧಾರದ ಮೇಲೆ ಅಂದಾಜು ಪಟ್ಟಿ ರೂ.110.50 ಕೋಟಿ ಹಾಗೂ ರೂ.85.20 ಕೋಟಿಗಳಿಗೆ ಪರಿಷ್ಕೃತವಾಗಿದೆ. ಇತ್ತೀಚಿನ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮ (NRDWP) ಮಾರ್ಗದರ್ಶಿಗಳನ್ವಯ ಆರ್ಸೆನಿಕ್, ಅಧಿಕ ಫ್ಲೋರೈಡ್ ಹಾಗೂ ನೀರು ಪೂರೈಕೆ ಪ್ರಮಾಣ ಕಡಿಮೆಯಾಗಿ ಸಮಸ್ಯೆಯಿರುವ ಜನವಸತಿಗಳಿಗೆ ಮಾತ್ರ ಮೊದಲ ಆದ್ಯತೆ ನೀಡಬೇಕಾಗಿದೆ. ಆದರೆ ಚಾಮರಾಜನಗರ ಜಿಲ್ಲೆಯ ಮೇಲ್ಕಂಡ 2 ಪ್ರಾಂತೀಯ ಬೃಹತ್ ಯೋಜನೆಗಳ ಜನವಸತಿಗಳು ಚಾಲ್ತಿ NRDWP ಮಾರ್ಗಸೂಚಿಗಳ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದ್ದರಿಂದ NRDWP ಪುನರ್ರಚಿತ ಮಾರ್ಗಸೂಚಿಗಳ ಪ್ರಕಾರ ಮೇಲ್ಕಂಡ 2 ಯೋಜನೆಗಳಿಗೆ ಸದ್ಯಕ್ಕೆ ಅನುದಾನ ಒದಗಿಸಲು ಅವಕಾಶವಿರುವುದಿಲ್ಲ.

ಈ ಹಿನ್ನೆಲೆಯಲ್ಲಿ, ಚಾಮರಾಜನಗರ ಜಿಲ್ಲೆಯ ಸಮಸ್ಯಾತ್ಮಕ ಜನವಸತಿಗಳಿಗೆ ಪರಿಷ್ಕೃತ ಮಾರ್ಗಸೂಚಿಗಳನ್ವಯ ವಾಸ್ತವಿಕತೆ ಆಧರಿಸಿ

ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು 2010–11 ಸಾಲಿನಲ್ಲಿ ಚಾಮರಾಜನಗರ ಜಿಲ್ಲಾ ಪಂಚಾಯತ್ ಅಗತ್ಯ ಕ್ರಮ ವಹಿಸುವುದು.

ಶ್ರೀ ಹೆಚ್ ಎಸ್ ಮಹದೇವಪ್ರಸಾದ್: ಚಾಮರಾಜನಗರ ಜಿಲ್ಲೆ ಶಾಶ್ವತ ಬರಗಾಲಪೀಡಿತ ಪ್ರದೇಶವಾಗಿದೆ. ಅದರಲ್ಲಿಯೂ ವಿಶೇಷವಾಗಿ ಗುಂಡ್ಲುಪೇಟೆ ಮತ್ತು ಚಾಮರಾಜನಗರ ತಾಲ್ಲೂಕು ಯಾವುದೇ ನದಿ ನೀರಿನ ಸೌಲಭ್ಯವಿಲ್ಲದಿರುವಂಥ ತಾಲ್ಲೂಕುಗಳಾಗಿವೆ. ಅದು ನೀರಾವರಿ ಇಲ್ಲದಿರುವಂಥ ತಾಲ್ಲೂಕು ಮತ್ತು ಯಾವುದೇ ನದಿ ನೀರು ಕೂಡ ಆ ಎರಡೂ ತಾಲ್ಲೂಕು ವ್ಯಾಪ್ತಿಯಲಿ ಹರಿದುಹೋಗುವುದಕ್ಕೆ ಅವಕಶವಿಲ್ಲದಿರುವಂಥ ತಾಲ್ಲೂಕುಗಳಾಗಿವೆ. ಹಾಗಾಗಿ, ಕೊಳವೆ ಬಾವಿ ಮುಖಾಂತರವೇ ಕುಡಿಯುವ ನೀರಿಗಾಗಲಿ ಅಥವಾ ವ್ಯವಸಾಯಕ್ಕಾಗಲಿ ಅವಲಂಬಿಸಬೇಕಾಂಥ ಪರಿಸ್ಥಿತಿ ಆ ಎರಡೂ ತಾಲ್ಲೂಕುಗಳಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ಅವಲಂಬಿಸಬೇಕಾದಂತ ಪರಿಸ್ಥಿತಿ ಆ ಎರಡೂ ತಾಲ್ಲೂಕುಗಳಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ಕುಡಿಯುವ ನೀರಿಗೆ ತೀವ್ರ ಅಭಾವ ಉಂಟಾಗಿ fluride contents ಆಗಿ ಮತ್ತು ಆರೋಗ್ಯ ಇಲಾಖೆ ಕೂಡ ಈ bore well ಗಳ ನೀರನ್ನು ಬಳಕೆ ಮಾಡಬಾರದೆಂದು ಒಂದು ವರದಿಯನ್ನು ಸಹ ಸರ್ಕಾರಕ್ಕೆ ಕೊಟ್ಟಿದೆ 700–800 ಅಡಿಗಳಿಗೆ bore well ಗಳನ್ನು ಕೊರೆದು ನೀರಿ ತರಬೇಕಾದ ಸನ್ನಿವೇಶವಿರುವುದರಿಂದ ಆ ಪ್ರಮಾಣದಲ್ಲಿ drill ಮಾಡಿ ನೀರನ್ನು ಕುಡಿಯುವುದು ಆರೋಗ್ಯಕ್ಕೆ ಒಳ್ಳೆಯದಲ್ಲವೆಂದು ಅದರಲ್ಲೂ 8–10 ವರ್ಷಗಳೊಳಗಿನ ಮಕ್ಕಳ ಆರೋಗ್ಯಕ್ಕೆ ಆ ನೀರು ಬಹಳ ಹಾನಿಕರವೆಂದು ಈಗಾಗಲೇ ಆರೋಗ್ಯ ಇಲಾಖೆ ಸಹ ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ. ಈ ಕಾರಣಕ್ಕಾಗಿ ಚಾಮರಾಜನಗರ ಜಿಲ್ಲಾಪಂಚಾಯತಿ ವತಿಯಿಂದ ಈ ಎರಡೂ ತಾಲ್ಲೂಕುಗಳ ಎಲ್ಲಾ ಹಳ್ಳಿಗಳಿಗೂ ಪೂರ್ಣ ಪ್ರಮಾಣದಲ್ಲಿ ನೀರಿನ ವ್ಯವಸ್ಥೆ ಮಾಡಬೇಕೆಂದು ಒಂದು ಯೋಜನೆ ರೂಪಿಸಿ ಅದಕ್ಕೆ ಎರಡು ಬಾರಿ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಅದನ್ನು ಹಿಂದೆ ಇಲ್ಲಿಯ ಸಂಪುಟದಲ್ಲೂ ಅನುಮೋದನೆಗೊಳಿಸಿ ಕೇಂದ್ರದ ಸಬ್‌ಮಿಷನ್ ಯೋಜನೆಯಡಿಯಲ್ಲಿ ಅದಕ್ಕೆ ನೆರವು ಕೇಳಿ ರಾಜ್ಯ ಸರ್ಕಾರ ಕಳುಹಿಸಿಕೊಟ್ಟಿತ್ತು.

ಆದರೆ, ಇವತ್ತು ಮಾನ್ಯ ಮಂತ್ರಿಯವರು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಿದ ಹಾಗೆ ಕೇಂದ್ರಸರ್ಕಾರದವರು ಕಳೆದ 2-3 ವರ್ಷಗಳಿಂದ ರಾಜ್ಯ ಸರ್ಕಾರಕ್ಕೆ ಒಟ್ಟಿಗೆ ಅನುದಾನವನ್ನು ನೀಡುತ್ತಿದ್ದೇವೆ, ಪ್ರತ್ಯೇಕವಾಗಿ Scheme wise ಹಣ ಕೊಡುವುದಕ್ಕೆ ನಮ್ಮಲ್ಲಿ ಅವಕಶವಿಲ್ಲ, ನಾವು ಸಬ್‌ಮಿಷನ್ ಯೋಜನೆಗೆಂದು ಪೂರ್ಣ ಹಣ ಏನು ರಾಜ್ಯ ಸರ್ಕಾರಕ್ಕೆ ಕೊಡುತ್ತೇವೆ, ಅದರೊಳಗಡೆ ನಿಮ್ಮ ಚಾಯರಾಜನಗರ ತಾಲ್ಲೂಕು, ಗುಂಡ್ಲುಪೇಟೆಯಲ್ಲಿಯ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತಗೊಳಿಸಿಕೊಳ್ಳಬೇಕು, ಅದು ರಾಜ್ಯ ಸರ್ಕಾರಕ್ಕೆ ಸೇರಿದಂಥ ವಿಷಯವೆಂದು, ನಾವು individual ಯಾವುದೇ scheme ಅನ್ನು approval ಮಾಡುತ್ತಿಲ್ಲವೆಂದು ಅವರೂ ಕೂಡ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ, ನಾವು ಕೇಂದ್ರದಲ್ಲಿರುವ ಗ್ರಾಮೀಣಾಭಿವೃದ್ಧಿ ಸಚಿವರನ್ನು ಭೇಟಿ ಮಾಡಿ ನಾನು ಮತ್ತು ನಮ್ಮ ಸ್ಥಳೀಯ ಲೋಕಸಭಾ ಸದಸ್ಯರು ಈ ಬಗ್ಗೆ ಎರಡು ಬಾರಿ ಚರ್ಚೆ ಮಾಡಿದಾಗಲೂ ಕೂಡ ಅವರು ಆ ರೀತಿಯ ಉತ್ತರವನ್ನು ಕೊಟ್ಟಿದ್ದಾರೆ. ವಿಶೇಷವಾಗಿ ನಮ್ಮ ತಾಲ್ಲೂಕುಗಳಲ್ಲಿ ವ್ಯವಸಾಯಕ್ಕೆ ನದಿ ನೀರಿನ ಸೌಲಭ್ಯ ಒದಗಿಸುವುದಕ್ಕೆ ರಾಜ್ಯ ಸರ್ಕಾರದಿಂದ ಸಾಧ್ಯವಾಗುವುದಿಲ್ಲ. ಕೊನೆಯ ಪಕ್ಷ ಕುಡಿಯುವುದಕ್ಕಾದರೂ ನಮ್ಮ ಗ್ರಾಮೀಣ ಭಾಗದ ಜನರಿಗೆ ನದಿ ಮೂಲದಿಂದ ನೀರಿನ ವ್ಯವಸ್ಥೆ ಒದಗಿಸಿಕೊಡಬೇಕೆನ್ನುವುದೇ ನಮ್ಮ ಕಳಕಳಿಯ ಮನವಿಯಾಗಿದೆ. ಈ ನಿಟ್ಟಿನಲ್ಲಿ ನಮ್ಮ ಈಗಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಸಹ ನಮ್ಮ ಕ್ಷೇತ್ರಕ್ಕೆ, ಚಾಮರಾಜನಗರಕ್ಕೆ ಅವರು ಸಚಿವರಾದ ಮೇಲೆ ಬಂದು ಅಲ್ಲಿಯ ಪರಿಸ್ಥಿತಿಯನ್ನೆಲ್ಲ ನೋಡಿದ ಮೇಲೆ ಅವರಿಗೂ ಮನವರಿಕೆಯಾಗಿದೆ. ಅದರಲ್ಲೂ ಅರಿವೆ ಎನ್ನುವಂಥ ಚಾಮರಾಜನಗರ ತಾಲ್ಲೂಕಿನ ಒಂದು ಹೋಬಳಿಯಲ್ಲಿ ಇವತ್ತು ಸುಮರು 8-10 ಕಿಲೋ ಮೀಟರ್ ದೂರ bore ಹಾಕಿಸಿ ನೀರು ತಂದರೂ ಕೂಡ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಒಂದು ದಿವಸಕ್ಕೆ ಆಗುವಷ್ಟು 40 LPCD ನೀರನ್ನು 8 ದಿನಗಳಾದರೂ ಕೊಡುವುದಕ್ಕೆ ಸಾಧ್ಯವಾಗದಿರುವಂಥ ಪರಿಸ್ಥಿತಿ ಇವತ್ತು ನಮ್ಮ

ಕ್ಷೇತ್ರದಲ್ಲಿ, ನಮ್ಮ ಎರಡೂ ತಾಲ್ಲೂಕುಗಳಲ್ಲಿ ನಿರ್ಮಾಣವಾಗಿದೆ. ಆದ್ದರಿಂದ, ಪರಿಷ್ಕೃತ ಅಂದಾಜಿನಂತೆ ಕುಡಿಯುವ ನೀರಿನ ಈ ವಿಶೇಷ ಯೋಜನೆಗೆ ಸುಮಾರು 200 ಕೋಟಿ ರೂಪಾಯಿಗಳ ಅಂದಾಜು ಇದೆ. ಈ ಬಗ್ಗೆ ತಾವು ರಾಜ್ಯ ಸರ್ಕಾರದಿಂದ ವಿಶೇಷ ಒತ್ತು ಕೊಟ್ಟು ಅದನ್ನು ಅನುಮೋದನೆ ಮಾಡಿಕೊಡಬೇಕು. ಹಾಗೆಯೇ, ಬಜೆಟ್‌ನಲ್ಲಿಯೂ ಕೂಡ ಚಾಮರಾಜನಗರ ಜಿಲ್ಲೆಗೆ ಕುಡಿಯುವ ನೀರಿಗೆಂದು 100 ಕೋಟಿ ರೂಪಾಯಿಗಳನ್ನು ಇಡಲಾಗಿದೆ ಎಂದು ಘೋಷಣೆ ಮಾಡಿದ್ದೀರಿ. ಇಂಥ ಒಂದು ರೆಡಿಯಾಗಿರುವಂಥ ಕುಡಿಯುವ ನೀರಿನ ಯೋಜನೆಯನ್ನು ಮಾಡುವುದರ ಮುಖಾಂತರ ಇಡೀ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೆ ನದಿ ಮೂಲದಿಂದ ಶಾಶ್ವತವಾಗಿ ಕುಡಿಯುವ ನೀರನ್ನು ಕೊಡುವಂಥ ವ್ಯವಸ್ಥೆ ಇದೆ. ಇಂಥ ಒಂದು ಯೋಜನೆಯನ್ನು ಅನುಷ್ಠಾನಗೊಳಿಸಿದರೆ ನಮ್ಮ ಭಾಗದ ಜನರು ಸದಾ ನೆನೆಪಿನಲ್ಲಿಟ್ಟಕೊಳ್ಳುತ್ತಾರೆ. ಕುಡಿಯುವ ನೀರಿಲ್ಲದೆ ಜನ ಜಾನುವಾರುಗಳಿಗೆ ಬಹಳಷ್ಟು ತೊಂದರೆ ಇದೆ. ಹಾಗಾಗಿ ರಾಜ್ಯ ಸರ್ಕಾರ ಶತಾಯ ಗತಾಯ ಯಾವುದಾದರೂ ಕಡೆಯಿಂದ ಹಣವನ್ನು ಈ ಯೋಜನೆಯನ್ನು ಮಾಡಿಕೊಡಬೇಕು. NRWP ಮಾರ್ಗಸೂಚಿ ಪ್ರಕಾರ ಬರುವುದಿಲ್ಲ, ಹಾಗಾಗಿ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಕೈಕಟ್ಟಿ ಕುಳಿತುಕೊಳ್ಳುವುದು ಸರಿಯಿಲ್ಲ. ರಾಜ್ಯ ಸರ್ಕಾರ ಇವತ್ತು ಸ್ಪಂದಿಸಬೇಕು. ವಿಶೇಷವಾಗಿ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಅತಿ ಹೆಚ್ಚಿನ ಸಂಖ್ಯೆಯಲ್ಲಿರುವಂಥ ಒಂದು ಜಿಲ್ಲೆ ನಮ್ಮದಾಗಿದೆ. ಈ ಯೋಜನೆಯನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು clear ಆಗಿ ಹೇಳಿರುವುದರಿಂದ, ನಾನು ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, ಅನೇಕ ಬಾರಿ ಮುಖ್ಯಮಂತ್ರಿಯವರು ಬಂದಾಗಲೂ ಕೂಡ ಚಾಮರಾಜನಗರ ಜಿಲ್ಲೆಯನ್ನು ದತ್ತು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ, ಅಭಿವೃದ್ಧಿಪಡಿಸುತ್ತೇವೆಂದು ಹೇಳಿದ್ದಾರೆ, ತಾವೂ ಕೂಡ ಗಮನಿಸಿದ್ದೀರಿ. ಯಾವುದೇ ಕಷ್ಟವಾದರೂ ಕೂಡ ರಾಜ್ಯ ಸರ್ಕಾರಕ್ಕೆ ಹಣದ ಕೊರತೆ ಇಲ್ಲವೆಂದು ಅನೇಕ ಸಂದರ್ಭಗಳಲ್ಲಿ ಹೇಳಿದ್ದಾರೆ. ಎರಡೂ ತಾಲ್ಲೂಕುಗಳ ಕುಡಿಯುವ ನೀರಿನ ಯೋಜನೆಗೆ 200

ಕೋಟಿ ರೂಪಾಯಿಗಳನ್ನು ಕೊಡುವುದು ದೊಡ್ಡ ವಿಚಾರವೇನೂ ಅಲ್ಲ. ಇದನ್ನು ದಯಮಾಡಿ ಪರಿಗಣಿಸಿ ಇದರ ಬಗ್ಗೆ ತಾವು ನಮ್ಮ ಎರಡೂ ಕ್ಷೇತ್ರಗಳ ಶಾಸಕರ ಜೊತೆ ನಿಮ್ಮ ಅಧಿಕಾರಿಗಳ ಸಭೆ ಕರೆದು ಇದರ ಬಗ್ಗೆ ತಾವು ಸಕಾರಾತ್ಮಕವಾಗಿ ಸ್ಪಂದಿಸಿ ಇದನ್ನು ಅನುಷ್ಠಾನಗೊಳಿಸಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಈಗಾಗಲೇ ನಾನು ಹೇಳಿದ ಹಾಗೆ, ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮ (NRWP) ಈ ಮಾರ್ಗದರ್ಶಿಯನ್ವಯ ಅದು ಬರುವುದಿಲ್ಲವೆಂದು ಸ್ಪಷ್ಟವಾಗಿ ಅವರು ನಮಗೆ ಹೇಳಿದ್ದರಿಂದ ಅದನ್ನು ಅದರಲ್ಲಿ ಸೇರಿಸಲಿಕ್ಕಾಗಲಿಲ್ಲ. ಅವರು ನಮಗೆ ಆ ಯೋಜನೆಯಲ್ಲಿ ಹಣ ಕೊಟ್ಟಿದ್ದಾರೆ. ನಾವು ಯಾವುದೇ ಯೋಜನೆ ತೆಗೆದುಕೊಳ್ಳುವುದಾದರೂ ಆ ಮಾರ್ಗದರ್ಶಿ ಒಳಗೆ ಬಂದರೆ ಮಾತ್ರ ಅವರು ಇದನ್ನು allow ಮಾಡುತ್ತಾರೆ. ಹೀಗಾಗಿ, ಅದು ಅದರಲ್ಲಿ ಬರುವುದಿಲ್ಲವೆಂದು ಆಗಿದ್ದರಿಂದ ನಾನು ಸ್ಪಷ್ಟವಾಗಿ ನಿಮಗೆ ಉತ್ತರ ಕೊಟ್ಟಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಸಹ ಹಲವಾರು ಬಾರಿ ಚಾಮರಾಜನಗರಕ್ಕೆ ಬಂದಾಗ ಅಲ್ಲಿನ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಅವರೂ ಕೂಡ ಅರ್ಥ ಮಾಡಿಕೊಂಡಿದ್ದಾರೆ. ನಾನು ಈ ಸಚಿವ ಸ್ಥಾನ ವಹಿಸಿಕೊಂಡ ಮೇಲೆ ಚಾಮರಾಜನಗರದಲ್ಲಿ review meeting ಮಾಡಿದ್ದೆ. ಕೆಲವು ಸ್ಥಳಗಳಿಗೂ ಭೇಟಿ ಕೊಟ್ಟಿದ್ದೆ. ಆಗ ಸಹ ಅಲ್ಲಿನ ಪರಿಸ್ಥಿತಿಯನ್ನು ನಾನೂ ಅರ್ಥ ಮಾಡಿಕೊಂಡಿದ್ದೇನೆ. ಅದಕ್ಕಾಗಿ ಅಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ಏನು ಮಾಡಬೇಕೆನ್ನುವ ಬಗ್ಗೆ ನಾವು ಹೆಚ್ಚು ಒತ್ತು ಕೊಡುವವರಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಮಂಡನೆ ಮಾಡಿದಾಗ ಬಜೆಟ್‌ನಲ್ಲಿಯೂ ಸಹ 100 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಚಾಮರಾಜನಗರ ಜಿಲ್ಲೆಯ ಗ್ರಾಮಗಳಿಗೆ ಕಬಿನಿ ನದಿಯಿಂದ ಕುಡಿಯುವ ನೀರು ಒದಗಿಸಲು 100 ಕೋಟಿ ರೂಪಾಯಿಗಳ ಯೋಜನೆ ರೂಪಿಸಲಾಗುವುದು ಎಂದು ಅವರೂ ಹೇಳಿದ್ದಾರೆ. ಹೀಗಾಗಿ, ಬಜೆಟ್‌ನಲ್ಲಿ ಘೋಷಣೆ ಮಾಡಿದ

ಪ್ರಕಾರ ಅದಕ್ಕೆ ಪೂರಕವಾಗಿ ಯೋಜನೆಯನ್ನು ನಿರೂಪಣೆ ಮಾಡುವಂಥದ್ದು ಮತ್ತು ಆ ಭಾಗದ, ಆ ಜಿಲ್ಲೆಯ ಎಲ್ಲ ಶಾಸಕರ ಮತ್ತು ಎಲ್ಲರ ಸಭೆಯನ್ನೂ ಕರೆದು ಪ್ರತ್ಯೇಕವಾಗಿ ಚರ್ಚೆ ಮಾಡಿ, ಅಲ್ಲಿಗೆ ಯಾವ ಯೋಜನೆಯನ್ನು ತರಬೇಕು, ಬಜೆಟ್ ಘೋಷಣೆಯನ್ವಯ ಅದಕ್ಕೆ ಯಾವ ರೀತಿಯಾಗಿ project ತಯಾರು ಮಾಡಬೇಕು ಎಂಬುದನ್ನೆಲ್ಲ ನಾವು ಗಂಭೀರವಾಗಿ ಆಲೋಚನೆ ಮಾಡುತ್ತಿದ್ದೇವೆ. ಯಾವುದೇ ರೀತಿಯಾಗಿ ಅದಕ್ಕೊಂದು ಪರಿಹಾರವನ್ನು ಹುಡುಕುವ ದಿಕ್ಕಿನಲ್ಲಿ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಆ ವಿಷಯ ಚಾಮರಾಜನಗರಕ್ಕೆ ಸಂಬಂಧಪಟ್ಟದ್ದು. ಇದು only clarification.

ಶ್ರೀ ಟಿ ಬಿ ಜಯಚಂದ್ರ: ಇದಕ್ಕೊಂದು ಸ್ಪಷ್ಟವಾದ ನೀತಿ ನನಗೆ ಅರ್ಥವಾಗಬೇಕು. ಕಬಿನಿ ನದಿ ಜಲಾಶಯದಿಂದ ನೂರಾರು ಹಳ್ಳಿಗಳಿಗೆ ನೀರು ಕೊಡುವುದು ಒಂದು ಮಹತ್ತರವಾದ ಯೋಜನೆಯಾಗಿದೆ. ಅದೆಲ್ಲ ಹೇಳಿದಿರಿ. ನಿಮ್ಮ ಸರ್ಕಾರದ ನೀತಿ ಏನೆಂಬುದು ನನಗೆ ಅರ್ಥವಾಗಬೇಕು. ಅಲ್ಲಿಗೆ ನೀರು ಕೊಡುವ ಸಂದರ್ಭದಲ್ಲಿ ನೈಸರ್ಗಿಕವಾಗಿ ನೀರು ಸಿಗುವ ಅವಕಾಶವಿದ್ದರೆ ನೈಸರ್ಗಿಕವಾಗಿ ಕೊಡುವುದಕ್ಕೆ ಸಾಧ್ಯವೇ? ಅಥವಾ ಪೈಪ್‌ಲೈನ್ ಮೂಲಕ ಕೊಡಬೇಕೆನ್ನುವುದು ನಿಮ್ಮ ನೀತಿಯೇ? ಇದು ನನಗರ್ಥವಾಗಬೇಕು. ಏಕೆಂದರೆ, ನಿಮ್ಮ ಸರ್ಕಾರದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನಾನು ಗಮನಿಸುತ್ತಿದ್ದೇನೆ. ನಿಮಗೆ ಅದು ಯಾವ technical ಆಗಿ ಯಾರು advise ಮಾಡುತ್ತಾರೋ ನನಗಂತೂ ಅರ್ಥವಾಗುತ್ತಿಲ್ಲ. ನೈಸರ್ಗಿಕವಾಗಿ ನೀರು ಹರಿದರೆ ಅಂತರ್ಜಲ ಜಾಸ್ತಿಯಾಗುತ್ತದೆ, fluoride ಅಂಶ ಕಡಿಮೆಯಾಗುತ್ತದೆಂದರೆ, ಬೇಡ, ಪೈಪ್‌ಲೈನ್ ಮೂಲಕ ನೀರು ಹರಿಸುತ್ತೇವೆಂದು ಹೇಳುತ್ತೀರಲ್ಲಾ, ಇದು ಸರ್ಕಾರವೇ ಅಥವಾ ಅಧಿಕಾರಿಗಳ ನಡವಳಿಕೆಯೇ? ಈ ಬಗ್ಗೆ ಸ್ಪಷ್ಟಪಡಿಸಿ. ಪೈಪ್‌ಲೈನ್ ಮೂಲಕ ನೀರು ಹರಿಸುವುದು ಆದ್ಯತೆಯೋ ಅಥವಾ

ನೈಸರ್ಗಿಕವಾಗಿ ನೀರು ಹರಿಸುವ ಮೂಲಕ fluride ಅಂಶ ಕಡಿಮೆಯಾಗುವುದಕ್ಕೆ ಆದ್ಯತೆಯೋ ಎಂಬ ಬಗ್ಗೆ clarify ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸದಸ್ಯರು ಹೇಳಿದ ಹಾಗೆ, ನೈಸರ್ಗಿಕವಾಗಿ ಹರಿದು ಬರುವ ನೀರು ಏನಿದೆ ಅದಕ್ಕೆ ಪೂರಕವಾಗಿ ಕುಡಿಯುವ ನೀರಿನ ಯೋಜನೆ ಜಾರಿಗೆ ತರಬೇಕಾಗಿದೆ ಅದಕ್ಕೆ ನಾವು ಆದ್ಯತೆ ಕೊಡುತ್ತೇವೆ. ಹೀಗಾಗಿ, ಹಿಂದೆ ಏನೇನಾಗಿದೆ ಎನ್ನುವ ವಿಚಾರ ಬಿಟ್ಟು, ಬರುವ ದಿವಸಗಳಲ್ಲಿ ಆ ರೀತಿಯಾದ ಯೋಜನೆ ನಿರೂಪಣೆ ಮಾಡಿದರೆ ಎಲ್ಲಾ ದೃಷ್ಟಿಯಿಂದ ಅನುಕೂಲವಾಗುತ್ತದೆ ಮತ್ತು ಕಾಸ್ಟ್ ಕಡಿಮೆಯಾಗುತ್ತದೆ. ಆ ದೃಷ್ಟಿಯಿಂದ ವಿಚಾರ ಮಾಡುತ್ತೇವೆ. ತಮ್ಮ ಸಲಹೆ ಬಹಳ ಅತ್ಯುತ್ತಮವಾದ ಸಲಹೆಯಾಗಿದೆ. ಅದನ್ನು ಬಹಳ serious ಆಗಿ ತೆಗೆದುಕೊಂಡು ಬರುವ ಯೋಜನೆಯೊಳಗಡೆ ಅದನ್ನು adopt ಮಾಡಿಕೊಳ್ಳುತ್ತೇವೆ.

ವಿಷಯ: ಕರ್ನಾಟಕ ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆಗೆ ಕರದಿಂದ ಮುಕ್ತಗೊಳಿಸುವ ಬಗ್ಗೆ.

ಶ್ರೀ ಶ್ರೀಕಾಂತ್ ಕುಲಕರ್ಣಿ(ಜಮಖಂಡಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆಗೆ ರಸ್ತೆ ಕರದಿಂದ ಮುಕ್ತಗೊಳಿಸುವ ಬಗ್ಗೆ ಮಾನ್ಯ ಸಾರಿಗೆ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಗೋವಿಂದ ಎಂ ಕಾರಜೋಳ (ಸಣ್ಣ ನೀರಾವರಿ ಸಚಿವರು)–(ಸಾರಿಗೆ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯನ್ನು ದಿವಾಳಿಯ ಅಂಚಿನಿಂದ ರಕ್ಷಿಸಲು 2010–11 ನೇ ಸಾಲಿನಲ್ಲಿ 350.00 ಕೋಟಿ ರೂಗಳ ವಿಶೇಷ ಅನುದಾನ ನೀಡುವ ಮೂಲಕ ಹಾಗೂ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ನೀಡಿರುವ ಮೋಟಾರು ವಾಹನ ತೆರಿಗೆ ವಿನಾಯಿತಿಯನ್ನು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೂ ವಿಸ್ತರಿಸುವಂತೆ ಆ ಕ್ಷೇತ್ರದ ಪ್ರಜಾ ಪ್ರತಿನಿಧಿಗಳು ಮಾನ್ಯ ಮುಖ್ಯ ಮಂತ್ರಿಯವರನ್ನು ಕೋರಿರುತ್ತಾರೆ.